ಕುಮಟಾ–ಹೊನ್ನಾವರಕ್ಕೆ ಒಂದು ರೀಜನಲ್ ಯೋಜನೆಯನ್ನು ೫.೭೨ ಕೋಟಿ ರೂಪಾಯಿಗಳಿಗೆ ತಯಾರಿಸಲಾಗಿತ್ತು ಅದರಲ್ಲಿ ೧೦ ಗ್ರಾಮಗಳನ್ನು ಸೇರಿಸಿತ್ತು. ಈಗ ಜನಾರೋಗ್ಯ ಇಲಾಖೆಯವರು ೮ ಹಳ್ಳಿಗಳಿಗೆ ನೀರು ಪೂರೈಕೆಗೆ ಯೋಜಿಸಿದ್ದಾರೆ, ಎರಡನ್ನು ಕೈ ಬಿಟ್ಟಿದ್ದಾರೆ. ಈಗ ರೀಜನಲ್ ಯೋಜನೆಯನ್ನು ಪುನರ್ ವಿಮರ್ಶಿಸಿ ಅಂದಾಜು ತಯಾರಿಸಲಾಗುತ್ತಿದೆ.

ಮೇಲಿನ ಯೋಜನೆಯು ಕಾರ್ಯಗತವಾಗುವುದರಲ್ಲಿ ವೇಳೆ ಹಿಡಿಯುವುದರಿಂದ ಹೊನ್ನಾವರ ಪಟ್ಟಣಕ್ಕೆ ೩೦ ಲಕ್ಷ ರೂ.ಗಳ ಒಂದು ಅಭಿವೃದ್ಧಿ ಯೋಜನೆಯನ್ನು ಏಳನೇ ಯೋಜನಾ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದಷ್ಟು ತೀವ್ರವಾಗಿ ಈ ಯೋಜನೆಯನ್ನು ಕೈಗೊಳ್ಳಲಾಗುವುದು.

ಅಲ್ಲದೆ ಮಂಬರುವ ಬೇಸಿಗೆಯಲ್ಲಿ ಇನ್ನೂ ೪ ಕೊಳವೆ ಬಾವಿಗಳನ್ನು ತೋಡಿ, ಅವುಗಳಿಗೆ ಕೈಪಂಪ್ ಜೋಡಿಸಲು ನಿರ್ದೇಶಿಸಿದ್ದು, ಸರ್ಕಾರಕ್ಕೆ ದಿನಾಂಕ ೩೧ನೇ ಡಿಸೆಂಬರ್ ೧೯೮೫ ರಂದು ಸಲ್ಲಿಸಿರುವ ೪೧೯ ಲಕ್ಷ ರೂ.ಗಳ ಪ್ರಸ್ತಾವನೆಯಲ್ಲಿ ಈ ಪಟ್ಟಣಕ್ಕೆ ೮೦ ಸಾವಿರ ರೂ.ಗಳನ್ನು ಕೇಳಿದೆ. ಸರ್ಕಾರದ ಆಜ್ಞೆ ಬಂದೊಡನೆ ಮಂಡಲಿಯು ಮುಂದಿನ ಕ್ರಮ ಕೈಗೊಳ್ಳುವುದು.

XIII ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದ ಸರ್ವೆ ನಂ. ೧೩೪ರಲ್ಲಿ ಇರುವ ಸಣ್ಣ ತೋಡನ್ನು ದುರಸ್ಥಿ ಪಡಿಸುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದ ಸರ್ವೆ ನಂಬರ್ ೧೩೪ರಲ್ಲಿ ೭ ಮತ್ತು ೧೦ನೇ ಸ್ಥಳವು ಹಾಗೂ ಇತರ ೫೦ ಎಕರೆ ಸ್ಥಳವು ತಗ್ಗು ಪ್ರದೇಶವಾಗಿದ್ದು, ಸಣ್ಣ ತೋಡಿನ ಮುಖಾಂತರ ಹೊಳೆಗೆ ನೀರು ಹರಿದು ಹೋಗುತ್ತಿದ್ದು ಮೇಲೆ ಹೇಳಿದ ತೋಡು ನಾವದ ರಸ್ತೆಯಲ್ಲಿರುವ ಪ್ರಯುಕ್ತ ನೀರು ಸರಿಯಾಗಿ ಹರಿದು ಹೋಗದೆ ಬೇಸಾಯ ಮಂಳಂಗಡೆಯಾಗಿ ಕೆಲವು ವರ್ಷಗಳಿಂದ ಪೈರು ಕೊಳೆತು ಹೋಗುತ್ತಿದೆ. ಆದ್ದರಿಂದ ಸದರಿ ತೋಡನ್ನು ಶಾಶ್ವತವಾದ ರೀತಿಯಲ್ಲಿ ರಿವಿಟ್‌ಮೆಂಟ್ ಮಾಡಿ ಸರಿಪಡಿಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ವಿವರಣೆ ಇಲ್ಲ. ಅದನ್ನು ತರಿಸಿ ನಿರ್ಣಯ ಮಾಡಬೇಕಾಗುತ್ತದೆ.

MR. SPEAKER.—Now I read rule 330, which says thus.

"The Speaker may, direct any member whose conduct is, in his opinion grossly, disorderly to with draw immediately from the House, and any Member so ordered to withdraw shall do so forthwith and shall absent himself during the remainder of the days sittings".

(Interruption)

ಆದರೂ ತಾವು ಬಂದಿದ್ದೀರಿ. ನಿಮಗೆ ನಾನು ಕ್ಷಮಾಧಾನ ಮಾಡಿದ್ದೇನೆ. ನೀವೀಗ ನಿಯಮ ೩೩೪ನ್ನು ಓದಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಕಾರ್ಯಕಲಾಪಗಳ ವರದಿ ತರಿಸಿಕೊಡಿ. ನಾನು ನಿಮಗೆ ಅಗೌರವ ತೋರಿಸಿಲ್ಲ. ಸರ್ಕಾರದ ನೀತಿಯನ್ನು ಪ್ರತಿಭಟಿಸುತ್ತಿದ್ದೇನೆ. ಅಷ್ಟೇ ಸ್ವಾಮಿ.

ಅಧ್ಯಕ್ಷರು.—ನಿಯಮ ೩೩೪ರ ರೀತ್ಯಾ ನೀವು ಕೊಟ್ಟಿರುವಕ್ಕೆ ವಿಷಯವನ್ನು ಓದಿ.

XIV ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಗನ ಕಾಯಿಲೆ ತೀವ್ರ ಗೊಂಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಮಂಗನ ಕಾಯಿಲೆ ತೀವ್ರ ಸ್ವರೂಪಕ್ಕೆ ಹೋಗಿದ್ದು ಪ್ರತಿ ನಿತ್ಯ ನೂರಾರು ಜನ ಈ ರೋಗಕ್ಕೆ

ತಂತ್ಯಾಗಂತ್ತಿದ್ದಾರೆ. ನಿನ್ನೆ ದಿವಸ ಈ ಪರಿಸ್ಥಿತಿ ನೋಡಲು ತೀರ್ಥಹಳ್ಳಿ ಆಸ್ಪತ್ರೆಗೆ ಹೋದಾಗ ಈ ಕಾಯಿಲೆ ಯಿಂದ ಈವರೆಗೆ ೯ ಜನ ಸತ್ತಿದ್ದು ಆವರಿಗೆ ಈವರೆಗೆ ಪರಿಹಾರ ಧನವನ್ನು ಸತ್ತ ಕುಟುಂಬಕ್ಕೆ ಕೊಟ್ಟಿಲ್ಲ.

ಸಾರ್ವಜನಿಕರ ಸಹಕಾರದಿಂದ ಶ್ರೀ ರಾಮೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ರೋಗಿಗಳಿಗೆ ಶುಶ್ರೂಷೆಗೆ ವ್ಯವಸ್ಥೆ ಮಾಡಿದ್ದು ಇದು ಪ್ರಾರಂಭವಾಗಿ ಒಂದು ತಿಂಗಳಾದರೂ ಸಾರ್ವಜನಿಕರ ಊಟದ ವ್ಯವಸ್ಥೆ ಮಾಡಿದ್ದು ಈ ಬಗ್ಗೆ ರೋಗಿಗಳನ್ನು ನೋಡಲು ಬರುವವರಿಗೆ ಸರ್ಕಾರ ಊಟದ ವ್ಯವಸ್ಥೆ ಸಹ ಮಾಡಿಲ್ಲ. ಈ ದಿನ ಅಲ್ಲಿ ಸಾರ್ವಜನಿಕರು ಪ್ರತಿಭಟಿಸಿ ಪುರಸಭಾ ಅಧ್ಯಕ್ಷರ ನೇತೃತ್ವದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂಬ ವಿಷಯವನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ (ವಾನ್ಯ ಆರೋಗ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಈ ವರ್ಷ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇದುವರೆಗೆ ಸುಮಾರು ೫೧೮ ಪ್ರಕರಣಗಳು ನಮಗೆ ವರದಿಯಾಗಿವೆ. ೨೮೯ ಜನರ ರಕ್ತದ ನಮೂನೆಗಳನ್ನು ಪರೀಕ್ಷೆ ನಡೆಸಲಾಗಿದೆ. ಸದ್ಯಕ್ಕೆ ೧೭ ಜನ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ೬ ಜನರನ್ನು ಸೂಕ್ತ ಸ್ಥಳದ ಅಭಾವದಿಂದ ರಾಮಲಿಂಗೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಚಿಕಿತ್ಸೆಗಾಗಿ ಸೇರಿಸಿಕೊಳ್ಳಲಾಗಿದೆ. ಔಷಧೋಪಚಾರಕ್ಕೆ ಅಗತ್ಯವಾದ ವ್ಯವಸ್ಥೆ ಫೆಬ್ರುವರಿ ತಿಂಗಳಲ್ಲಿ ಸಾರ್ವಜನಿಕ ಆಸ್ಪತ್ರೆ, ತೀರ್ಥಹಳ್ಳಿ ವೈದ್ಯಾಧಿಕಾರಿಗಳಿಗೆ ಮಾಡಲಾಗಿದೆ. ಆಸ್ಪತ್ರೆಯ ರೋಗಿಗಳಿಗೆ ಊಟೋಪಚಾರಕ್ಕಾಗಿ ೯೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ರೋಗಿಗಳ ಜೊತೆ ಬರುವ ಒಬ್ಬ ವ್ಯಕ್ತಿಗೆ ಊಟ ಕೊಡುವ ವಿಚಾರವನ್ನೂ ಪರಿಶೀಲನೆಮಾಡಲಾಗುತ್ತಿದೆ. ಕ್ಯಾಸನೂರಿನಲ್ಲಿ ಈ ರೋಗದಿಂದ ಇದುವರೆಗೂ ಒಟ್ಟು ೩ ಜನ ಮರಣಹೊಂದಿದ್ದಾರೆ. ಹೆಚ್ಚಿನ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿವಮೊಗ್ಗ ಇವರಿಂದ ವರದಿ ಬಂದ ಕೂಡಲೇ ಮುಂದಿನ ಕ್ರಮಕ್ಕಾಗಿ ಪರಿಹಾರ ಧನ ಕೊಡುವ ಬಗ್ಗೆ ಮುಂದೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಪುರಸಭಾಧ್ಯಕ್ಷರ ನೇತೃತ್ವದಲ್ಲಿ ಸಾರ್ವಜನಿಕ ಪ್ರತಿಭಟನೆ ಕೈಗೊಂಡಿರುವುದರ ಬಗ್ಗೆ ಯಾವುದೇ ವರದಿಯೂ ಬಂದಿಲ್ಲ. ಇದುವರೆಗೂ ಒಟ್ಟು ೧೬೪ ಜನ ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು—೧೯೮೬—೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆಯ ಕ್ರಮಾಂಕ—೬೧

ಕಾರ್ಮಿಕ ಮತ್ತು ಉದ್ಯೋಗ

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೪ ಕೋಟಿ, ೯೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಇನ್ನಾವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ—೬೨

ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವೆಚ್ಚದಲ್ಲಿ ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೨,೮೭,೮೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಇನ್ನವಿಸಿಕೊಳ್ಳುತ್ತೇನೆ.